**ದಿನಾಂಕಃ 27-6-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಃ ಶ್ರೀ ಆರ್ ವಿ ವಕೀಲರಿಂದ** ಪ್ರತಿವಾದಿ 5 ರ ಪರ

ನನ್ನದು ಕಡಮಲಕುಂಟೆ ವಾಸ , ನನ್ನ ಪ್ರಮಾಣ ಪತ್ರದಲ್ಲಿ ವಕೀಲರು ನಾನು ಹೇಳಿದ ಹಾಗೆ ಬರೆದಿರುತ್ತಾರೆ. ದಾವೆಯನ್ನು ಯಾವ ವಿಷಯಕ್ಕಾಗಿ ಹಾಕಿರುತ್ತಾರೆ ಎಂದು ಗೊತ್ತು . ದಾವಾ ಆಸ್ತಿಯ ಸ ನಂ ನನಗೆ ಗೊತ್ತಿಲ್ಲ. ಯಾವ ಸ ನಂ ನಲ್ಲಿ ಎಷ್ಟು ಎಕರೆ ಜಮೀನಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯ ಪಹಣಿಯನ್ನು ನೋಡಿಲ್ಲ. ಯಾರ ಹೆಸರಿನಲ್ಲಿ ಪಹಣಿಗಳು ಇವೆ ಎಂದು ನನಗೆ ಗೊತ್ತಿಲ್ಲ. ಗಂಗಮ್ಮ ನಮ್ಮ ಊರಿನವರು ಅವರು 5 ನೇ ಪ್ರತಿವಾದಿಯ ಹೆಂಡತಿ.

ದಾವಾ ಆಸ್ತಿಯ ಐಟಂ ನಂ.4 ಮತ್ತು 5 ಅನ್ನು ಓ ಎಸ್ ನಂ. 32/1990 ರಲ್ಲಿ ವಾದಿಯ ತಂದೆ ಗಂಗಮ್ಮನಿಗೆ ಮಾರಾಟ ಮಾಡಿರುತ್ತಾರೆಂದು ತೀರ್ಪು ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆರ್ ಎ ನಂ.104/1994 ಅನ್ನು ದಾಖಲಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯೂ ಸಹ ಗಂಗಮ್ಮನ ಪರವಾಗಿ ತೀರ್ಪು ಆಯಿತು ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮನವರು ಜಾರಿ ಅರ್ಜಿ ಸಂಖ್ಯೆ 24/2007 ಅನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ , ಸದರಿ ಪ್ರಕರಣದಲ್ಲಿ ಗಂಗಮ್ಮನ ಪರವಾಗಿ ನ್ಯಾಯಾಲಯದಿಂದ ಕ್ರಯಪತ್ರವನ್ನು ಮಾಡಿಕೊಡಲಾಗಿದೆ ಎಂದರೆ ಗೊತ್ತಿಲ್ಲ . ಆ ಕಾರಣ ಗಂಗಮ್ಮನ ಹೆಸರಿಗೆ ಪಹಣಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 28-10-2015 ರಂದು ಗಂಗಮ್ಮ ಮತ್ತು ಮಕ್ಕಳು ಆಸ್ತಿಗಳನ್ನು ವಿಭಾಗ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನಂತರ ದಾವಾ ಆಸ್ತಿಯ ಐಟಂ ನಂ.4 ಮತ್ತು 5 ರ ಪಹಣಿಗಳು ಗಂಗಮ್ಮನ ಮಕ್ಕಳ ಹೆಸರಿನಲ್ಲಿರುತ್ತವೆ ಎಂದರೆ ಗೊತ್ತಿಲ್ಲ. ಇಂದಿಗೂ ದಾವಾ ಆಸ್ತಿಯ ಐಟಂ ನಂ.4 ಮತ್ತು 5 ರ ಪಹಣಿಗಳು ಗಂಗಮ್ಮನ ಮಕ್ಕಳ ಹೆಸರಿನಲ್ಲಿರುತ್ತವೆ ಎಂದರೆ ಗೊತ್ತಿಲ್ಲ. ಗಂಗಮ್ಮನ ಮಕ್ಕಳನ್ನು ಈ ದಾವೆಯಲ್ಲಿ ಸೇರಿದ ಬಗ್ಗೆ ನನಗೆ ಗೂತ್ತಿಲ್ಲ. ವಾದಿಗಳಿಗೆ ದಾವಾ ಆಸ್ತಿಯ ಐಟಂ ನಂ 4 ಮತ್ತು 5 ರಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಅವರ ಪರವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 1 ರಿಂದ 4 ಗೈರು ಹಾಜರಿರುತ್ತಾರೆ , ಅವರ ಪರ ಶ್ರೀ ಎಸ್ ವಿ ಆರ್ ವಕೀಲರು ಹಾಜರಿದ್ದು ಪಾಟೀಸವಾಲಿಗೆ ಸಮಯಕೋರಿರುತ್ತಾರೆ. ಯಾವುದೇ ಸಮಂಜಸ ಕಾರಣ ಇಲ್ಲದೇ ಇದ್ದುದರಿಂದ ಪಾಟೀಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**

**ಪಾವಗಡ.**